ಚನ್ನಪಟ್ಟಣದ ಟಿಕೆಟ್ ವಿಚಾರವಾಗಿ ದೆಹಲಿಯ ನಾಯಕರು ಮುಂದಿನ ದಿನಗಳಲ್ಲಿ ನಿರ್ಧಾರ ಮಾಡುತ್ತಾರೆ. ಚುನಾವಣಾ ದಿನಾಂಕ ಘೋಷಣೆ ಆಗಲಿ. ಅಲ್ಲಿವರೆಗೆ ಯಾವುದೇ ತೀರ್ಮಾನ ಇಲ್ಲ.
● **ನಿಖಿಲ್ ಕುಮಾರಸ್ವಾಮಿ** ಜೆಡಿಎಸ್ ಯುವ ಮುಖಂಡ

ಸುದ್ದಿ ಸಿಂಚನ

ಬಿಜೆಪಿ ಸದಸ್ಯತ್ವ ನೋಂದಣಿಗೆ ಮನವಿ

ಕುಂದಾಣ: ಭಾರತೀಯ ಜನತಾ ಪಾರ್ಟಿಯ ಸದಸ್ಯತ್ವ ಅಭಿಯಾನವು ಜಾರಿಯಲ್ಲಿದ್ದು, ಆನ್‌ಲೈನ್ ಲಿಂಕ್ ಮೂಲಕ ಸದಸ್ಯತ್ವವನ್ನು ಪಡೆದುಕೊಳ್ಳಲುಅವಕಾಶವಿದ್ದು, ಬಿಜೆಪಿ ಸದಸ್ಯತ್ವ ನೋಂದಣಿಯನ್ನು ಮಾಡಿಸಿಕೊಳ್ಳಬೇಕೆಂದು ಬಿಜೆಪಿ ದೇವನಹಳ್ಳಿ ತಾಲೂಕು ಅಧ್ಯಕ್ಷ ಬಿ.ಸಿ. ಸುಂದರೇಶ್ (ಸುನೀಲ್) ತಿಳಿಸಿದ್ದಾರೆ. ಆನ್ ಲೈನ್ ಲಿಂಕ್ ಮುಖಾಂತರ https://narendramodi.in/bjpsadasya&ta2024/JWUO07 ಹೆಚ್ಚು ನೋಂದಣಿ ಮಾಡುವ ಜವಾಬ್ದಾರಿ ಇದೆ ಎಂದು ಪ್ರಕಟಣೆಯಲ್ಲಿ ದೇವನಹಳ್ಳಿ ತಾಲೂಕಿನ ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ನಾಳೆ ಕಂಬಾಳು ಸಂಘದ ವಾರ್ಷಿಕ ಮಹಾಸಭೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯ ಕಂಬಾಳು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ 2023-24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸೆ.19ರಂದು ಬೆಳಿಗ್ಗೆ 11ಕ್ಕೆ ಸಂಘದ ಆವರಣದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಕೆ.ಬಿ.ಪ್ರಭುದೇವ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನದಿಗೆ ಬಿದ್ದು ಡ್ಯಾಂ ಆಪರೇಟರ್ ಸಾವು

ಚನ್ನಪಟ್ಟಣ: ನದಿಗೆ ಬಿದ್ದು ಡ್ಯಾಂ ಆಪರೇಟರ್‌ವೊಬ್ಬರು ಮೃತಪಟ್ಟಿರುವ ಘಟನೆ ತಾಲೂಕಿನ ಇಗ್ಗಲೂರು ಬ್ಯಾರೇಜ್‌ನಲ್ಲಿ ನಡೆದಿದೆ. ಡ್ಯಾಂ ಆಪರೇಟರ್‌ಮಲ್ಲೇಶ್ (52) ಮೃತ ವ್ಯಕ್ತಿ. ಕೆ.ಎಂ.ದೊಡ್ಡಿಯ ಹಾಗಲಹಳ್ಳಿ ಗ್ರಾಮದ ನಿವಾಸಿಯಾದ ಇವರು ತಾಲೂಕಿನ ಇಗ್ಗಲೂರು ಬ್ಯಾರೇಜ್‌ನಲ್ಲಿ ಗುತ್ತಿಗೆ ಆಧಾರದ ಮೇಲೆ ಡ್ಯಾಂ ಆಪರೇಟರ್‌ಆಗಿ ಕೆಲಸ ನಿರ್ವಹಿಸುತ್ತಿದ್ದರು. ಭಾನುವಾರ ರಾತ್ರಿ ಇವರು ನೈಟ್ ಶಿಫ್ಟ್‌ಗೆ ಕೆಲಸಕ್ಕೆ ತೆರಳಿದ್ದರು. ಬೆಳಿಗ್ಗೆ ಇವರ ಶವ ನದಿಯಲ್ಲಿ ದೊರೆತಿದೆ. ಮಲ್ಲೇಶ್ ನದಿಗೆ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾರೆ ಎನ್ನಲಾಗುತ್ತಿದೆ. ಸಾವಿನ ಕುರಿತು ಅನುಮಾನವಿದ್ದು, ಈ ಕುರಿತು ತನಿಖೆ ನಡೆಸುವಂತೆ ಇವರ ಅಣ್ಣ ಶಿವಣ್ಣಗೌಡ ದೂರು ನೀಡಿದ್ದಾರೆ. ಆಕ್ಕೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತರಬೇತಿಗೆ ಅರ್ಜಿ ಆಹ್ವಾನ

ದೊಡ್ಡಬಳ್ಳಾಪುರ: ರುಡ್‌ಸೆಟ್ ಸಂಸ್ಥೆಯಿಂದ ಎಂಬ್ರಾಯ್ಡರಿ, ಆರಿ ವರ್ಕ್ ಹಾಗೂ ಫ್ಯಾಬ್ರಿಕ್ ಪೇಟಿಂಗ್ ಕುರಿತ 30 ದಿನಗಳ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.ನೋಂದಾಯಿಸಲು ಅ.8 ಕಡೆ ದಿನ. ಮಾಹಿತಿಗೆ ರುಡ್‌ಸೆಟ್ ಸಂಸ್ಥೆ, ಆರಿಶಿನಕುಂಟೆ, ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಥವಾ ಮೊಬೈಲ್ ಸಂಖ್ಯೆ 9740982585, 9380162042 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಭಾರತದ ಶಿಲ್ಪಕಲೆಗೆ ವಿಶ್ವಕರ್ಮರ ಕೊಡುಗೆ ಅಪಾರ

ಸಮುದಾಯದ ಮುಖಂಡ ಶ್ರೀನಿವಾಸ ಆಚಾರ್ಯ ಅಭಿಪ್ರಾಯ | ಕಾಳಿಕಾಂಬ ದೇವಸ್ಥಾನದಲ್ಲಿ ವಿಶ್ವಕರ್ಮ ಜಯಂತಿ ಕಾರ್ಯಕ್ರಮ

● **ಕನ್ನಡಪ್ರಭ ವಾರ್ತೆ** ರಾಮನಗರ

ನಮ್ಮ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಾಚೀನ ಸ್ಮಾರಕಗಳು ಮತ್ತು ಮಹಲ್ಲುಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಂತಹ ಸ್ಮಾರಕಗಳನ್ನು ನಿರ್ಮಿಸಿರುವ ನಮ್ಮ ಪೂರ್ವಿಕರ ಶ್ರಮ ಮತ್ತು ಸೃಜನಾತ್ಮಕ ಕಲೆ ಇಂದಿನ ಯುವ ಪೀಳಿಗೆಗೆ ಮಾದರಿಯಾಗಬೇಕು ಎಂದು ಸಮುದಾಯದ ಮುಖಂಡರಾದ ಶ್ರೀನಿವಾಸ ಆಚಾರ್ಯ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ವಿಜಯನಗರಕಾಳಿಕಾಂಬದೇವಸ್ಥಾನದಆವರಣದಲ್ಲಿ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಸಮುದಾಯವು ಹಿಂದಿನ ಕಾಲದಿಂದಲೂ ಐದು ಕಸುಬುಗಳನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದೆ. ಈ ಐದು ವೃತ್ತಿಗಳು ಮನುಷ್ಯನ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವ ವೃತ್ತಿಯಾಗಿವೆ. ಪುರಾಣಗಳ ಪ್ರಕಾರ ವಿಶ್ವಕರ್ಮರು ಇಡೀ ಪ್ರಪಂಚವನ್ನು ಸೃಷ್ಟಿಸಿದವರು. ರಾಮಾಯಾಣದಲ್ಲಿ ಬರುವ ಶ್ರೀಲಂಕ ಹಾಗೂ ಮಹಾಭಾರತದ ಬರುವ ಇಂದ್ರಪ್ರಸ್ಥ ಪ್ರದೇಶಗಳಲ್ಲಿ ಭವ್ಯ ಅರಮನೆಯನ್ನು ವಿಶ್ವಕರ್ಮರು ನಿರ್ಮಿಸಿದ್ದನ್ನು ಕಾಣಬಹುದು ಎಂದು ತಿಳಿಸಿದರು.

ರಾಮನಗರದ ವಿಜಯನಗರ ಕಾಳಿಕಾಂಬ ದೇವಸ್ಥಾನದ ಆವರಣದಲ್ಲಿ ವಿಶ್ವಕರ್ಮ ಜಯಂತಿ ಸಮಾರಂಭವನ್ನು ಗಣ್ಯರು ಉದ್ಘಾಟಿಸಿದರು.

ಕರ್ನಾಟಕ ಸರ್ಕಾರ 2016 ರಲ್ಲಿ ವಿಶ್ವಕರ್ಮ ಜಯಂತಿ ಆಚರಣೆಯನ್ನು ಜಾರಿಗೆ ತಂದಿತು. ಇಂದಿನ ಆಧುನಿಕ ಎಂಜಿನಿಯರುಗಳು ಅಸಾಧ್ಯವೆನ್ನುವ ಅನೇಕ ರೀತಿಯ ಕಲೆಯನ್ನು ಬಹಳ ಹಿಂದೆಯೇ ನಮ್ಮ ದೇಶದಿಂದ ಇಡೀ ವಿಶ್ವಕ್ಕೆಪರಿಚಯಿಸಿದವರು. ವಿಶ್ವಸಂಸ್ಥೆಯ ವಿಶ್ವಪಾರಂಪರ್ಯ ಪಟ್ಟಿಗೆ ಸೇರಿರುವ ಅನೇಕ ಕಲ್ಲಿನ ಕೆತ್ತನೆಗಳು ಇಂದಿಗೂ ಪ್ರಪಂಚದ ಅತ್ಯುತ್ತಮ ಕಲೆಗೆ ನಿದರ್ಶನವಾಗಿವೆ ಎಂದು ಶ್ರೀನಿವಾಸ ಆಚಾರ್ಯ ಹೇಳಿದರು.

ಕಾರ್ಯಕ್ರಮಕ್ಕೂ ಮುನ್ನ ಜಿಲ್ಲಾ ಕ್ರೀಂಡಾಗಣದಿಂದ ವಿಜಯನಗರ ಕಾಳಿಕಾಂಬದೇವಸ್ಥಾನದವರೆಗೆಬೆಳ್ಳಿರಥದಲ್ಲಿ ದೇವರ ಮೆರವಣಿಗೆಗೆ ಅಪರ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಚಾಲನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕನಿರ್ದೇಶಕಸತೀಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ರಮೇಶ್ ಬಾಬು, ಜಿಲ್ಲಾಆರೋಗ್ಯಶಿಕ್ಷಣಾಧಿಕಾರಿ ಕೆ.ಜೆ.ಅರ್ಪಿತಾ, ತಾಲೂಕುವೈದ್ಯಾಧಿಕಾರಿ ಡಾ.ಉಮಾ, ಡಾ.ಮಧುಮತಿ, ಸಾಹಿತಿ ಶೈಲಾಜ, ಸಮುದಾಯದ ಮುಖಂಡರಾದ ಪಿ.ಉಮೇಶ್, ರಾಧಾಕೃಷ್ಣ, ಮುತ್ತುರಾಜ್, ಶ್ರೀನಿವಾಸ್‌ತಗಡಚಾರ್, ಲಿಂಗಚಾರ್, ಅಪ್ಪಾಜಿಚಾರ್, ಬಸವರಾಜಚಾರ್‌ಇದ್ದರು.

ವಿಶ್ವಕರ್ಮ ಬಡ ವಿದ್ಯಾರ್ಥಿಗಳಿಗೆ ನೆರವಾಗಿ

ವಿಶ್ವಕರ್ಮ ನಿಗಮದ ಬಿ.ಪಿ.ಸತ್ಯವತಿ ಸಲಹೆ | ವಿಶ್ವಕರ್ಮ ಜಯಂತ್ಯುತ್ಸವ ಸಮಾರಂಭ

● **ಕನ್ನಡಪ್ರಭ ವಾರ್ತೆ** ರಾಮನಗರ

ವಿಶ್ವ ಕರ್ಮ ಸಮುದಾಯದಲ್ಲಿನ ಬಡ ವಿದ್ಯಾರ್ಥಿಗಳನ್ನು ಗುರುತಿಸಿ ಅವರ ವಿದ್ಯಾಭ್ಯಾಸಕ್ಕೆ ಬೇಕಾದ ಉತ್ತೇಜನ ನೀಡಲು ಕ್ರಮ ವಹಿಸಬೇಕು ಎಂದು ರಾಜ್ಯದ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷೆ ಬಿ.ಪಿ.ಸತ್ಯವತಿ ಹೇಳಿದರು.

ನಗರದ ಚೈತನ್ಯ ಭವನದಲ್ಲಿ ಶ್ರೀ ವಿಶ್ವಕರ್ಮ ಸಾಂಸ್ಕೃತಿಕ ಸೇವಾ ಸಂಘ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿ, ಸಮುದಾಯದಲ್ಲಿನ ಸಾಕಷ್ಟು ಪ್ರತಿಭಾವಂತರಿಗೆ ವ್ಯಾಸಂಗ ಮಾಡಲು ಆರ್ಥಿಕ ಸಂಕಷ್ಟ ಇದೆ. ಅಂತಹವರನ್ನು ಪತ್ತೆ ಹಚ್ಚಿ ವಿದ್ಯಾಭ್ಯಾಸಕ್ಕೆನೆರವಾಗಬೇಕು ಎಂದು ಹೇಳಿದರು.

ಸಂಘದ ವತಿಯಿಂದ ವೇದ ಆಗಮ ವಿಷಯದ ತರಗತಿ, ಜ್ಯೋತಿಷ್ಯ ತರಗತಿ ಪ್ರಾರಂಭಿಸಬೇಕು. ಕುಲಬಾಂಧವರು ನಿರ್ವಹಿಸುವ ಕುಲಕಸುಬಗಳ ಬಗ್ಗೆ ಸರ್ಕಾರದಿಂದ ಸಿಗುವಸೌಲಭ್ಯಗಳಮಾಹಿತಿತಲುಪಿಸಬೇಕು. ಜತೆಗೆ ಪಂಚಾಯಿತಿ ಮಟ್ಟದಲ್ಲಿ ಹಿಂದುಳಿದ ಕುಲಬಾಂಧವರ ಮಾಹಿತಿ ಸಂಗ್ರಹಿಸಬೇಕು. ಸಂಘಕ್ಕೆ ಸಿಎ ನಿವೇಶನ ಪಡೆದುಕೊಳ್ಳಲು ಜಿಲ್ಲಾಧಿಕಾರಿಗಳು, ಶಾಸಕರು ಹಾಗೂ ಸಚಿವರಿಗೆ ಪತ್ರ ಬರೆದು ವಿನಂತಿಸುವಂತೆ ಸತ್ಯವತಿ ಸಲಹೆ ನೀಡಿದರು.

ರಾಮನಗರದ ಚೈತನ್ಯ ಭವನದಲ್ಲಿ ಶ್ರೀ ವಿಶ್ವಕರ್ಮ ಸಾಂಸ್ಕೃತಿಕ ಸೇವಾ ಸಂಘ ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತ್ಯುತ್ಸವ ಆಚರಿಸಲಾಯಿತು.

- ವಿಶ್ವಕರ್ಮ ಸಮಾಜದ ಮಕ್ಕಳಿಗೆ ಆರ್ಥಿಕ ಸಂಕಷ್ಟವಿದೆ.
- ವಿಶ್ವಕರ್ಮರಿಗೆ ಸರ್ಕಾರ ಅಗತ್ಯ ಸೌಲಭ್ಯ ನೀಡಬೇಕು.

ಶ್ರೀ ವಿಶ್ವಕರ್ಮ ಸಾಂಸ್ಕೃತಿಕ ಸೇವಾ ಸಂಘದ ಗೌರವಾಧ್ಯಕ್ಷ ಡಾ.ಚಂದ್ರಶೇಖರ್ ಮಾತನಾಡಿ, ಈ ಹಿಂದೆಯೇ ವಿದ್ಯಾಸಿರಿ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ನಿರ್ಣಯಿಸಲಾಗಿದೆ. ಇದರಿಂದ ಸಮುದಾಯದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಲಿದೆ ಎಂದರು.

ವೈಣಿಕ ವಿದ್ವಾನ್ ಕೆ.ಎಂ.ಲೋಕೇಶ್ವರ ಹಾಗೂನಾಗರಾಜಚಾರ್‌ಅವರನ್ನುಸನ್ಮಾನಿಸಲಾಯಿತು. ಡಾ.ಮಧುಸೂದನ್, ಸಿ. ರಾಜಣ್ಣ, ಸಂಘದ ಉಪಾಧ್ಯಕ್ಷ ಪ್ರಕಾಶ್, ಜಂಟಿ ಕಾರ್ಯದರ್ಶಿ ಚಂದ್ರೇಶ್ ಬಾಬು, ಖಜಾಂಚಿ ನಾಗರಾಜು, ಕಾರ್ಯದರ್ಶಿ ಪುಷ್ಪಾಲತಾ, ನಿರ್ದೇಶಕ ಸ್ವಾಮಿ ಮತ್ತಿತರರು ಇದ್ದರು.

ವಿಶ್ವಕರ್ಮರು ದೈವಸ್ವರೂಪಿ: ಜಿಲ್ಲಾಧಿಕಾರಿ

● **ಕನ್ನಡಪ್ರಭ ವಾರ್ತೆ** ದೇವನಹಳ್ಳಿ

ಹತ್ತಾರು ಶತಮಾನಗಳ ಹಿಂದೆ ಅಂದಿನ ದ್ವಾರಕ ಪಟ್ಟಣ, ಅರಮನೆಗಳು ಅಲ್ಲದೆ ದೇವರುಗಳ ಆಭರಣಗಳು ಅಲ್ಲದೆ ತ್ರಿಶೂಲ ಮತ್ತು ಸುದರ್ಶನ ಚಕ್ರ ಅಲ್ಲದೆ ಹತ್ತಾರು ಆಯುಧಗಳ ಸ್ವರೂಪಗಳ ವಿಶ್ವಕರ್ಮರು ವಾಸ್ತುಗಾರರಾಗಿದ್ದರು ಎಂದು ಜಿಲ್ಲಾಧಿಕಾರಿ ಡಾ.ಎನ್. ಶಿವಶಂಕರ್ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಕನ್ನಡಮತ್ತು ಸಂಸ್ಕೃತಿ ಇಲಾಖೆ ಹಾಗೂ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಿಶ್ವಕರ್ಮ ಜಯಂತಿಯಲ್ಲಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ಇಂದು ನಮ್ಮ ದೇಶದಲ್ಲಿ ಸಂಸ್ಕೃತಿ, ಧರ್ಮ ಮತ್ತು ಪರಂಪರೆ ಉಳಿದಿರಬೇಕಾದರೆ ವಿಶ್ವಕರ್ಮರೇ ಕಾರಣ. ದೇವನಹಳ್ಳಿಯಲ್ಲಿ ಶಿಲ್ಪಕಲಾ ಶಾಲೆ ತೆರೆದಿದ್ದ ಎ.ಸಿ.ಹನುಮಂತಾಚಾರ್ಯ ಅವರು ಅನೇಕಮಹನೀಯರತದ್ರೂಪುಪ್ರತಿಮೆಗಳನ್ನು ತಯಾರಿಸಿದವರಾಗಿದ್ದು ಅನೇಕ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದರು ಎಂದು ತಿಳಿಸಿದರು.

ದೇವನಹಳ್ಳಿಯಲ್ಲಿ ನಡೆದ ಜಿಲ್ಲಾ ಮಟ್ಟದ ವಿಶ್ವಕರ್ಮ ಜಯಂತಿಯನ್ನು ಜಿಲ್ಲಾಧಿಕಾರಿ ಡಾ. ಶಿವಶಂಕರ್ ಉದ್ಘಾಟಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ಎನ್. ಕೃಷ್ಣಪ್ಪ, ದೇವಾಲಯಗಳಲ್ಲಿರುವ ಕಲ್ಲಿನ ಮೂರ್ತಿಗೆ ಜೀವಕಳೆ ನೀಡುವವರು ಶಿಲ್ಪಿಗಳು, ಅಲ್ಲದೆ ನಮ್ಮ ಮೈಸೂರು ಅರಮನೆಗೆ ಜೀವಕಳೆ ಕೊಟ್ಟಂತಹವರು ವಿಶ್ವಕರ್ಮ ಸಮಾಜದವರು, ಸಮಾಜದಲ್ಲಿ ಸಾಂಸ್ಕೃತಿಕ ನೀಡಿದ ಕೀರ್ತಿ ವಿಶ್ವಕರ್ಮ ಸಮಾಜದವರಿಗೆ ಸಲ್ಲುತ್ತದೆ ಎಂದರು

ತಹಸೀಲ್ದಾರ್ ಬಾಲಕೃಷ್ಣ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಸಿ. ಜಗನ್ನಾಥ್, ವಿಶ್ವಕರ್ಮ ಸಮಾಜದ ಕುಪೇಂದ್ರಾಚಾರ್, ಎಂ.ಶ್ರೀಧರ್, ಎನ್.ಸುರೇಶಾಚಾರ್ ಹಾಗೂ ಎನ್. ಸತ್ಯನಾರಾಯಣಾಚಾರ್, ನಾಗರಾಜ್, ಪಿಳ್ಳಪ್ಪಯ್ಯ , ಮಹಿಳಾ ಸಂಘಟನೆಯ ವಿಮಲ ಇದ್ದರು.

ಕಲ್ಲನ್ನು ದೇವರ ರೂಪಕ್ಕೆ ತರುವ ಕೆಲಸ ಶ್ಲಾಘನೀಯ

ತಹಸೀಲ್ದಾರ್ ಶರತ್ ಕುಮಾರ್ ಅಭಿಮತ | ಮಾಗಡಿಯಲ್ಲಿ ವಿಶ್ವಕರ್ಮ ಜಯಂತಿ

ಮಾಗಡಿ: ವಿಶ್ವಕರ್ಮ ಜನಾಂಗದವರು ಪ್ರತಿಯೊಂದು ಕಲೆಯನ್ನು ನೈಜವಾಗಿ ಮಾಡುವ ಮೂಲಕ ಎಲ್ಲರಿಗೂ ಆಪ್ತರಾಗಿದ್ದು ನಾವು ದೇವಸ್ಥಾನದಲ್ಲಿ ಪೂಜಿಸುವ ವಿಗ್ರಹವನ್ನು ಕೆತ್ತನೆ ಮಾಡುವ ಮೂಲಕ ಕಲ್ಲನ್ನು ದೇವರ ರೂಪಕ್ಕೆ ತರುವ ದೊಡ್ಡ ಕೆಲಸ ಎಂದು ತಹಸೀಲ್ದಾರ್‌ಶರತ್ ಕುಮಾರ್‌ಹೇಳಿದರು.

ಪಟ್ಟಣದತಾಲೂಕುಕಚೇರಿಆವರಣದಲ್ಲಿ ತಾಲ್ಲೂಕು ಆಡಳಿತ ವತಿಯಿಂದ ವಿಶ್ವಕರ್ಮ ಜನಾಂಗ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ವಿಶ್ವ ಜನಾಂಗ ಮಾಡುತ್ತಿದ್ದು ಇವರ ಜಯಂತಿಯನ್ನು ಸರ್ಕಾರದವತಿಯಿಂದ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಹೇಳಿದರು.

ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ತಿಪ್ಪಸಂದ್ರ ಪ್ರಕಾಶ್‌ಮಾತನಾಡಿ, ವಿಶ್ವಕರ್ಮ ಜನಾಂಗದವರು ನೇಗಿಲಿನಿಂದ ಹಿಡಿದು ಸೈನಿಕರು ಬಳಸುವ ವಸ್ತುಗಳನ್ನು ಕರಕುಶಲ ಮೂಲಕ ಆಯುಧಗಳಾಗಿ ಮಾಡಿಕೊಡುತ್ತಾರೆ. ಇದರ ಜತೆಗೆ ದೇವರ ಕೆತ್ತನೆ, ದೇವಾಲಯಗಳಕೆತ್ತನೆಯಲ್ಲೂನಮ್ಮ ಜನಾಂಗದವರ ಪಾತ್ರ ಸಾಕಷ್ಟಿದ್ದು, ಬಾದಾಮಿ, ಐಹೊಳೆ, ಪಟ್ಟದಕಲ್ಲುದೇವಸ್ಥಾನ ಸುಂದರವಾಗಿ ಕಾಣಲು ನಮ್ಮ ಜನಾಂಗದ ಶ್ರಮ ಸಾಕಷ್ಟಿದ್ದು ಕರಕುಶಲ ಮೂಲಕ ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿದೆ. ಚಿನ್ನ, ಬೆಳ್ಳಿ ಆಭರಣದಲ್ಲೂ ನಮ್ಮ ಜನಾಂಗದ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು.



ಮಾಗಡಿ ತಾಲೂಕು ಕಚೇರಿ ಆವರಣದಲ್ಲಿ ವಿಶ್ವಕರ್ಮ ಜಯಂತಿ ಆಚರಣೆ ಮಾಡಲಾಯಿತು.

ವಿಶ್ವಕರ್ಮ ಜಯಂತಿ ಸರಳವಾಗಿ ಆಚರಿಸಿ ಸಿಹಿ ವಿತರಣೆ ಮಾಡಲಾಯಿತು.

ಗ್ರೇಟ್ -2 ತಹಸೀಲ್ದಾರ್‌ಪ್ರಭಾಕರ್, ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಮಂಜುನಾಥ್, ಖಜಾಂಚಿ ಹೊಸಪೇಟೆ ಮೂರ್ತಿ, ಕಾರ್ಯದರ್ಶಿ ಮಲ್ಲೇಶ್, ಉಪಾಧ್ಯಕ್ಷ ನಾಗೇಂದ್ರ, ಮುಖಂಡರಾದ ಲೋಕೇಶ್, ತೇಜು ಮೂರ್ತಿ, ಪ್ರಕಾಶ್, ಕುಮಾರ್, ನರಸಿಂಹಮೂರ್ತಿ, ರಂಗನಾಥಚಾರ್, ಅಪ್ಪಯ್ಯ, ಎಚ್.ಎಸ್. ಮೂರ್ತಿ, ಧನಂಜಯ ಭಾಗವಹಿಸಿದ್ದರು.

ಕಾಂಗ್ರೆಸ್ ಸರ್ಕಾರದಲ್ಲಿ ಕಾನೂನು ಕುಸಿದಿದೆ

ನಿಖಿಲ್ ಕುಮಾರಸ್ವಾಮಿ ಆರೋಪ | ಜೆಡಿಎಸ್ ಕಾರ್ಯಕರ್ತರು, ಮುಖಂಡರ ಸಭೆ

● **ಕನ್ನಡಪ್ರಭ ವಾರ್ತೆ** ಚನ್ನಪಟ್ಟಣ

ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕಾನೂನುಸುವ್ಯವಸ್ಥೆಹದಗೆಟ್ಟಿರುವುದಕ್ಕೆ ನಾಗಮಂಗಲ ಘಟನೆ ಸಾಕ್ಷಿಯಾಗಿದೆ. ಒಂದು ಸಮುದಾಯ ಓಲೈಸಲು ಇನ್ನೊಂದು ಸಮುದಾಯಕ್ಕೆ ಅನ್ಯಾಯ ಮಾಡುವುದು ಎಷ್ಟು ಸರಿ ಎಂದು ಜೆಡಿಎಸ್ ಯುವಘಟಕದರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪ್ರಶ್ನಿಸಿದರು.

ಚನ್ನಪಟ್ಟಣ ಉಪಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಅಕ್ಕೂರು ಜಿಪಂ ವ್ಯಾಪ್ತಿಯಲ್ಲಿ ಜೆಡಿಎಸ್ ಕಾರ್ಯಕರ್ತರು, ಮುಖಂಡರ ಸಭೆ ನಡೆಸಿ ಸುದ್ದಿಗಾರರ ಜತೆ ಮಾತನಾಡಿದರು.

ಗಣೇಶನ ಹಬ್ಬ ವರ್ಷಕ್ಕೊಮ್ಮೆ ಬರುತ್ತದೆ. ನಾವು ಒಂದು ತಿಂಗಳ ಕಾಲ ಗಣೇಶನನ್ನು ವಿಸರ್ಜನೆ ಮಾಡುತ್ತೇವೆ. ಮುಸ್ಲಿಮರು ದಿನಕ್ಕೆ 5 ಬಾರಿ ನಮಾಜ್ ಕೂಗುತ್ತಾರೆ. ನಾವು ಅದನ್ನು ಗೌರವಿಸುತ್ತೇವೆ ಅಲ್ಲವೇ ಎಂದರು.

ಹಿಂದೂ-ಮುಸ್ಲಿಂ ಸಾಮರಸ್ಯ ಕದಡುತ್ತಿರುವುದೇ ಕಾಂಗ್ರೆಸ್. ಈ ಬಗ್ಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ಉತ್ತರ ನೀಡಲಿ ಎಂದು ಸಚಿವ ಚೆಲುವರಾಯಸ್ವಾಮಿಗೆ ಪರೋಕ್ಷ ತಿರುಗೇಟು ನೀಡಿದರು.

ಚನ್ನಪಟ್ಟಣದಟಿಕೆಟ್ ವಿಚಾರವಾಗಿ ದೆಹಲಿಯ ನಾಯಕರು ಮುಂದಿನ ದಿನಗಳಲ್ಲಿ ನಿರ್ಧಾರ ಮಾಡುತ್ತಾರೆ. ಚುನಾವಣಾ ದಿನಾಂಕ ಘೋಷಣೆ ಆಗಲಿ. ಅಲ್ಲಿವರೆಗೆ ಯಾವುದೇ ತೀರ್ಮಾನ ಇಲ್ಲ ಎಂದು ಟಿಕೆಟ್ ವಿಚಾರಕ್ಕೆ ಸ್ಪಷ್ಟನೆ